


**ಇನ್‌ಸ್ಪೆಕ್ಟರ್:** ಏನಯ್ಯಾ ಕಾನ್‌ಸ್ಟೆಬಲ್ ಆಕಳಿಸ್ತಾ ಕೂತಿದ್ದೀಯ?
**ಕಾನ್‌ಸ್ಟೆಬಲ್:** ಇನ್ನೇನ್ ಮಾಡ್ಲಿ ಸರ್! ಕಳೆದೊಂದು ತಿಂಗಳಿಂದ ಒಂದ್ ಕೊಲೆ ಆಗಿಲ್ಲ, ಒಂದ್ ಕಳ್ಳತನ ಆಗಿಲ್ಲ. ಹೋಗಲಿ ಅಂದ್ರೆ ಒಂದು ಗಲಾಟೆನೂ ಆಗಿಲ್ಲ.

***

**ಪತಿ:** ಈಗಾಗಲೇ ಎರಡು ಬಾರಿ ಆಕ್ಸಿಡೆಂಟ್ ಮಾಡಿದ್ರೂ ಹೇಗೋ ಬದುಕಿದ್ದೇನೆ. ಹೀಗಾಗಿ ಡ್ರೈವರ್ ಅನ್ನು ಬದಲಾಯಿಸ್ತಾ ಇದ್ದೀನಿ.
**ಪತ್ನಿ:** ಬೇಡ ಕಣ್ರಿ... ಪಾಪಾ ಆ ಡ್ರೈವರ್‌ಗೆ ಇನ್ನೊಂದು ಅವಕಾಶ ಕೊಟ್ಟು ನೋಡ್ರಿ.

***

**ಚಂದು:** ಕೇಶವ, ಕೆಲ ಯುವಕರು ಮದುವೆ ಎಂದಾಕ್ಷಣ ಹೆದರುತ್ತಾರೆ, ಏಕೆ ಗೊತ್ತಾ?
**ಕೇಶವ:** ಗೊತ್ತು, ಇತರೆ ಹುಡುಗಿಯರಿಂದ ದೂರ ಇರಬೇಕಾಗುತ್ತಲ್ಲ ಅಂತ.




**ಗಂಡ:** ಸುಮಾ, ಎಲ್ಲ ಸವಲತ್ತು ಇರುವ ಕೆಲಸಕ್ಕೆ ಕರೆ ಬಂದಿದೆ. ಆದರೆ ಅಲ್ಲಿ ಮುಂದಿನ ಭವಿಷ್ಯಕ್ಕೆ ದಾರಿ ಇಲ್ಲ.
**ಹೆಂಡತಿ:** ಮುಂದಿನ ಭವಿಷ್ಯ ಅಂದ್ರೆ?
**ಗಂಡ:** ಆ ಕಂಪನಿ ಬಾಸ್ ಲೇಡಿ. ಆಕೆಗೆ ಮದುವೆಯಾಗಿದೆಯಂತೆ.

**ಡಾಕ್ಟರ್:** ಆಶ್ಚರ್ಯ, ನಿಮ್ಮದು ಮತ್ತು ನಿಮ್ಮ ಹೆಂಡತಿಯ ರಕ್ತದ ಗುಂಪು ಒಂದೇ ಆಗಿದೆ.
**ಆತ:** ಇದರಲ್ಲಿ ಆಶ್ಚರ್ಯ ಏನು ಬಂತು ಡಾಕ್ಟ್ರೇ, ಇಪ್ಪತ್ತೈದು ವರ್ಷಗಳಿಂದ ಆಕೆ ಕುಡಿಯುತ್ತಿರೋದು ನನ್ನ ರಕ್ತನೇ ಅಲ್ವಾ...

**ಪತಿ:** ಸ್ಕೂಟರ್ ಸ್ಟಾರ್ಟ್ ಮಾಡಿದಾಗಿನಿಂದಲೂ ಸಿಡುಕುತ್ತಿದ್ದವಳು, ಸಿಗ್ನಲ್ ಬಂದ ತಕ್ಷಣ ನಗುಮುಖ ಮಾಡ್ಕೊಂಡಿದ್ದೀಯಲ್ಲ ಏನ್ ಸಮಾಚಾರ?
**ಪತ್ನಿ:** ಇಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಇದೆ ಅದಕ್ಕೆ.

**ಗಿರಿ:** ರಾಮು, ಯಾವತ್ತು ಹೊಗಳದೇ ಇದ್ದ ನಿಮ್ಮಪ್ಪನನ್ನು ಇವತ್ತು ಇಷ್ಟೊಂದು ಹೊಗಳ್ತಿದ್ದೀಯಲ್ಲ, ಯಾಕೆ?
**ರಾಮು:** ನಮ್ಮಪ್ಪ ತಮ್ಮ ಕ್ಷೇತ್ರವನ್ನು ಈ ಸಲ ನನಗೆ ಬಿಟ್ಟುಕೊಡ್ತಿದ್ದಾರೆ. ಅದಕ್ಕೆ.

**ಮನೆಯಾಕೆ:** ಮೊನ್ನೆ ಎರಡು, ನಿನ್ನೆ ಎರಡು, ಇವತ್ತು ಒಂದು ಕಪ್ ಒಡೆದು ಹಾಕಿದ್ದೀಯ. ನಾಳೆ ಎಷ್ಟು ಒಡೆದು ಹಾಕ್ತಿಯಂತ ಈಗಲೇ ಹೇಳಿಬಿಡು. ಅದನ್ನು ಸಹಿಸಿಕೊಳ್ಳೋಕೆ ಈಗಲಿಂದಲೇ ತಯಾರಾಗ್ತೀನಿ.
**ಕೆಲಸದಾಕೆ:** ಅಮ್ಮವ್ರೆ, ನಾಳೆಯಿಂದ ನಾನು ಕೆಲಸಕ್ಕೆ ಬರೋದಿಲ್ಲ!

**ಧನಂಜಯ:** ನಿಖಿಲ್ ನಿನಗೆ ಪತ್ತೇದಾರಿ ಕಾದಂಬರಿ ಪುಸ್ತಕ ಕೊಟ್ಟಿದ್ದೆನಲ್ಲ, ಅದನ್ನು ಓದಿ ಕೊಲೆಗಾರ ಯಾರು ಅಂತ ತಿಳಿದುಕೊಂಡ್ಯಾ?
**ನಿಖಿಲ್:** ಗೊತ್ತಾಯ್ತು, ಕೊಲೆಗಾರರು ಒಬ್ಬರಲ್ಲ ಇಬ್ಬರು.
**ಧನಂಜಯ:** ಯಾರು ಆ ಇಬ್ಬರು?
**ನಿಖಿಲ್:** ಒಬ್ಬರು ಈ ಪುಸ್ತಕ ಬರೆದವರು, ಇನ್ನೊಬ್ಬರು ಈ ಪುಸ್ತಕ ಓದು ಅಂತ ಕೊಟ್ಟ ನೀನು. ಆ ಪುಸ್ತಕ ಓದಿ ನಾನು ಸಾಯೋದೊಂದೇ ಬಾಕಿ.

**ಮನೆಯಾಕೆ:** ಏನಪ್ಪ, ಒಂದು ವಾರದಿಂದ ಭಿಕ್ಷೆ ಬೇಡೋಕೆ ಬರಲಿಲ್ಲ, ಎಲ್ಲೋಗಿದ್ದೆ?
**ಭಿಕ್ಷುಕ:** ಹೌದಮ್ಮ, ಹೋದ ಸಲ ನೀವು ಕೊಟ್ಟಿದ್ದ ಬಾತ್ ತಿಂದು ಹುಷಾರು ತಪ್ಪಿ, ಆಸ್ಪತ್ರೆಗೆ ಅಡ್ಮಿಟ್ ಆಗಿದ್ದೆ.

**ಪತ್ನಿ:** ಅಲ್ಲಿ ನೋಡ್ರಿ... ನಿಮ್ಮ ಸ್ನೇಹಿತ ತನ್ನ ಹೆಂಡ್ತಿಯನ್ನು ಎಷ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದಾರೆ.
**ಪತಿ:** ಹೌದಲ್ವಾ... ಅವನ ಹೆಂಡ್ತಿಯಂತೆ ನೀನೂ ತವರಿಗೆ ಹೋಗಲು ಸಿದ್ಧವಾಗು. ಅಷ್ಟೇ ಪ್ರೀತಿಯಿಂದ ನಾನೂ ನಿನ್ನನ್ನು ಮಾತನಾಡಿಸುತ್ತೇನೆ.

**ಆತ:** ನರ್ಸ್, ನಾನು ಇಲ್ಲಿ ಸೇರಿ ಒಂದು ವರ್ಷವಾಯ್ತಾ ಬಂತು. ಈಗಲಾದರೂ ನನ್ನನ್ನ ಮನೆಗೆ ಕಳಿಸಿಕೊಡ್ತಾರಾ?
**ನರ್ಸ್:** ಖಂಡಿತ ಕಳಿಸ್ತಾರೆ. ಡಾಕ್ಟ್ರ ಕಾರಿನ ಇಎಂಐ ಮುಗೀತು.

**ಅನಂತ:** ಅಲ್ಲಿರೋ ಎರಡು ಮರಗಳು ನಾಲ್ಕಾಗೋವರೆಗೆ ಕುಡಿಯೋಣ.
**ಸಪ್ಲೆಯರ್:** ಅಲ್ಲಿರೋದು ಒಂದೇ ಮರ.

**ಹರೀಶ:** ರಜಾ ಇದ್ದಾಗ ಹೆಂಡತಿಯೊಡನೆ ಜಗಳವಾಡಿ, ಕೆಲಸಕ್ಕೆ ಹೋಗುವಾಗ ರಾಜಿ ಮಾಡ್ಕೊಳ್ತಾ ಇದೀಯಲ್ಲ. ಯಾಕೆ?
**ನಾಗರಾಜು:** ಅದಾ... ರಜಾ ದಿನಗಳಲ್ಲಿ ಅನಗತ್ಯ ಖರ್ಚುಗಳಿಗೆಲ್ಲ ದುಡ್ಡು ಕೇಳದೆ ಇರಲಿ ಅಂತ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ